ನನ್ನ ಓದು



ಲಲಿತಾ ಕೆ. ಹೊಸಪ್ಯಾಟಿ

# ಸಹಬಾಳ್ವೆಯ ಕಥೆಗಳು

## ವಿನ್ನೀ ಪೂಹಾ

ಎ.ಎ. ಮಿಲ್ನೆ ಅವರು 1926ರಲ್ಲಿ ಇಂಗ್ಲೀಷ್‌ನಲ್ಲಿ ಮಕ್ಕಳಿಗಾಗಿ ಬರೆದ 'ವಿನ್ನೀ ಪೂಹಾ' ಕಾದಂಬರಿಯನ್ನು ಆನಂದ ಪಾಟೀಲರು ಕನ್ನಡಕ್ಕೆ ರೂಪಾಂತರಿಸಿದ್ದಾರೆ. ದೊಡ್ಡವರೂ ಬಾಲ್ಯದ ನೆನಪನ್ನು ಸವಿಯುವಂತಹ ಮಕ್ಕಳ ಕಾದಂಬರಿ ಇದು.

ವಿನ್ನಿ ಪೂಹಾ ಕರಡಿಬೊಂಬೆ. ಪುಟ್ಟ ಬಾಲಕ ಕ್ರಿಸ್ಟೋಫರ್ ಈ ಬೊಂಬೆಯನ್ನು ಹಚ್ಚಿಕೊಂಡ ಕಥಾನಕವಿದು. ತಂದೆ ಮಿಲ್ನೆ ಹೇಳುವ ಕಥೆಯನ್ನು ಕ್ರಿಸ್ಟೋಫರ್ ಜೊತೆ ಕರಡಿ ಬೊಂಬೆಯೂ ಕೇಳಿಸಿಕೊಳ್ಳುವುದೇ ಕುತೂಹಲದ್ದು. ಮರದ ಪೊಟರೆಯಲ್ಲಿ ಮನೆ ಮಾಡಿಕೊಳ್ಳುವುದು, ಕಾಂಗ್ರಾ, ಜಾಲ್, ಪಿಗ್ಲೆಟ್ ಹಂದಿ, ಮನುಷ್ಯರಂತೆ ವರ್ತಿಸುವುದು ಮುದಕೊಡುತ್ತದೆ. ಇಂಗ್ಲೆಂಡ್ ಪ್ರಾದೇಶಿಕ ವಾತಾವರಣದ ಪರಿಚಯವನ್ನು ಧಾರವಾಡದ ಆಡುಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಮಕ್ಕಳು ಬಾಯ್ದೆರೆ ಓದಿನಲ್ಲಿ ಕೇಳಿಸಿಕೊಂಡಾಗ ಸ್ವಾರಸ್ಯಕರವಾಗಿರುತ್ತದೆ. ಪರಭಾಷಾ ಸಂಗತಿಗಳನ್ನು ಕನ್ನಡದ ಮಕ್ಕಳಿಗೆ ಮುಟ್ಟಿಸುವಲ್ಲಿ ಯಶಸ್ವಿ ಪ್ರಯತ್ನವಾಗಿದೆ.

## ಸೂರಕ್ಕಿ ಗೇಟ್

'ಸೂರಕ್ಕಿ ಗೇಟ್' ಎನ್ನುವುದು, ಸೂರಕ್ಕಿ ಮನೆಯ ಹತ್ತಿರದ ಸರ್ಕಲ್ ಹೆಸರು. ಪುಟ್ಟುವಿನ ಅಮ್ಮ ಶಿಕ್ಷಕಿಯೂ ಬರಹಗಾರ್ತಿಯೂ ಆಗಿರುತ್ತಾಳೆ. ನಿಸರ್ಗದ ಮಧ್ಯದಲ್ಲಿರುವ ತೋಟದ ಮನೆ ಪುಟ್ಟೂವಿಗೂ ಮನೆಯವರಿಗೂ ಇಷ್ಟ. ತೋಟದ ಮನೆಯಲ್ಲಿ ನಡೆದ ಘಟನೆಗಳ, ಪ್ರಕೃತಿಯಲ್ಲಿಯ ಸನ್ನಿವೇಶಗಳ, ನಿಸರ್ಗದೊಂದಿಗಿನ ಒಡನಾಟದ ಚಿತ್ರಣ ಕುತೂಹಲದ್ದು. ಬೆಳದಿಂಗಳ ಕೂಟ, ಮಾಳದಲ್ಲಿ ಕಳೆವ ರಾತ್ರಿ, ಆಲೆಮನೆ, ಹಕ್ಕಿಗಳು ಗೂಡು ಕಟ್ಟುವುದು, ಕೋಳಿಯ ಜೀವನ, ಇವೆಲ್ಲವುಗಳ ಪರಿಚಯ ಮಕ್ಕಳಿಗಾಗುವುದೇ ವಿಶೇಷ. ಇವೆಲ್ಲ ಇಂದಿನ ಮಕ್ಕಳಿಗೆ ಅಪರೂಪ ಎನ್ನುವುದಕ್ಕಿಂತ ಕಾಣಲು ಸಹ ಸಿಗುವುದಿಲ್ಲ.

ನಿಸರ್ಗದೊಂದಿಗಿನ ಸಹಬಾಳ್ವೆಯಲ್ಲಿ